ಅ. ರೂ.4.00 ಲಕ್ಷಗಳ ಅಂದಾಜಿನ ವೆಚ್ಚದಲ್ಲಿ ಕಾರಾಗೃಹದಿಂದ ಒಳಾಂಗಣದ ರಸ್ತೆ ಅಭಿವೃದ್ಧಿಯ ಕಾಮಗಾರಿ ಪ್ರಗತಿಯಲ್ಲಿದೆ.

ಇ. ಇಲ್ಲ. ಅಂತಹ ಪ್ರಸ್ತಾಪನೆ ಬಂದಲ್ಲಿ ಅದನ್ನು ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ವಿದ್ಯುತ್ ಕೊರತೆ

155 (284) ಶ್ರೀ ಮನೋಹರ ಪುನ್ನಪ್ಪ ಕಾಡೋಲ್ಕಾರ(ಉಚ್ಚಾಗಾಂವ್) : ಮಾನ್ಯ ಇಂಧನ ರಾಜ್ಯ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಸಾಧ್ಯವಾದಷ್ಟು ನೀರು ಲಭ್ಯವಿದ್ದರೂ ವಿದ್ಯುತ್ ಕೊರತೆಯಿಂದಾಗಿ ರೈತರ ಬೆಳೆಗಳು ನಾಶವಾಗುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ, ವಿದ್ಯುತ್ ಕೊರತೆಯಂತಹ ಜ್ವಲಂತ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ. 2002-03ರಲ್ಲಿ ಸಾಲಿನಲ್ಲಿ ಮಳೆಯತೀವ್ರ ಅಭಾವದ ಕಾರಣ ಹಾಗೂ ಜಲವಿದ್ಯುತ್ ಉತ್ಪಾದನೆಯು ತಗ್ಗಿರುವ ಹಿನ್ನಲೆಯಲ್ಲಿ ರಾಜ್ಯದಲ್ಲಿ ವಿದ್ಯುತ್ ಅಭಾವವು ತಲೆದೋರಿದೆ. ಪ್ರಸ್ತುತ 35084 ಮಿಲಿಯನ್ ಯೂನಟ್‌ಗಳಷ್ಟು ವಿದ್ಯುತ್ ಬೇಡಿಕೆಯಿದ್ದು. ಕೇವಲ 29404 ಮಿಲಿಯನ್ ಯೂನಿಟ್ ಪ್ರಸಕ್ತ ಸಾಲಿನಲ್ಲಿ 5680 ಮೀ. ಯೂನಿಟ್‌ಗಳ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ. ಆದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ಜಾರಿಗೆ ತರುವುದು ಅನಿವಾರ್ಯವಾಗಿದೆ.

ಆ. ಪ್ರಸ್ತುತ ವಿತರಿಸಲಾಗುತ್ತಿರುವ ವಿದ್ಯುತ್ ಪ್ರಮಾಣವನ್ನು ಬೇಸಿಗೆಯಲ್ಲಿ ಸಹ ಮುಂದುವರಿಸಲು ಸರ್ಕಾರವು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆರ್‌ಟಿಪಿಎಸ್ 7ನೇ ಘಟಕ, ಎನ್‌ಟಿಪಿಸಿ ಆಶ್ರಯದಲ್ಲಿ, ತಾಲ್ಚರ್‌ನಲ್ಲಿ 500 ಮೆ.ವ್ಯಾ ಸಾಮಥ್ಯದ ಸ್ಥಾವರ ಹಾಗೂ ಮೆ: ವ್ಯಾ ಸ್ಥಾವರ ಸ್ಥಾಪನೆ ಹಾಗು ಮೆ : ಎನ್‌ಎಲ್‌ಸಿಯವರಿಂದ 210 ಮೆ,ವ್ಯಾ,ಸಾಮರ್ಥ್ಯದ ಸ್ಥಾವರ ಸ್ಥಾಪನೆಯಿಂದಾಗಿ ವಿದ್ಯುತ್ ಲಭ್ಯತೆಯ ಪ್ರಮಾಣದಲ್ಲಿ ಸ್ವಲ್ಪಮಟ್ಟಿನ ಏರಿಕೆ ಕಂಡುಬಂದಿದೆ. ಆದ್ದರಿಂದ ಫೆಬ್ರವರಿಯಿಂದ ಮೇ 2003 ರವರೆಗೆ ಬೇಸಿಗೆಯಲ್ಲಿ ವಿದ್ಯುತ್ ಕೊರತೆ ನೀಗಿಸುವಲ್ಲಿ ಬಹಳ ಸಹಾಯವಾಗುತ್ತದೆ. ದೀರ್ಘಾವಾದಿ ಯೋಜನೆಯಡಿಯಲ್ಲಿ ಕೆಪಿಸಿಟಿಎಲ್ ಆಶ್ರಯದಲ್ಲಿ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗುತ್ತದೆ.

1.	ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರ	500	ಮೆ.ವ್ಯಾ
2.	ಆಲಮಟ್ಟಿ ಜಲವಿದ್ಯುತ್ ಯೋಜನೆ	290	〃
3.	ಆರ್‌ಟಿಪಿಎಸ್ ಹಂತ 8ನೇ ಘಟಕ	210	〃
4.	ಮಹಾದಾಯಿ ಜಲವಿದ್ಯುತ್ ಯೋಜನೆ	320	〃
5.	ಬಡದಿ ಸಂಯುಕ್ತ ಆವರ್ತನ ವಿದ್ಯುತ್ ಸ್ಥಾವರ	700	〃

ಇದಲ್ಲದೆ ಕೆಳಕಂಡ ಕೇಂದ್ರ ವಿದ್ಯುತ್ ಸ್ಥಾವರಗಳಿಂದ ಗಣನೀಯ ಪ್ರಮಾಣದಲ್ಲಿ ವಿದ್ಯುತ್ ಪಡೆಯುವ ನೀರಿಕ್ಷೆಯಿದೆ.

1.	ಎನ್‌ಎಲ್‌ಸಿ ಹಂತ-1 (ವಿಸ್ತರಣೆ)	100	ಮೆ.ವ್ಯಾ
2.	ತಾಲ್ಚರ್ ಹಂತ-2	396	"
3.	ಎನಎಲಸಿ ಹಂತ-2 (ವಿಸ್ತರಣೆ)	100	"
4.	ರಾಮಗುಂಡಂ ಹಂತ-3	87	"
5.	ಕೈಗಾ ಹಂತ-3 ಮತ್ತು 4	108	"

ಪ್ರಸರಣ ಮತ್ತು ಒತರಣ ನಷ್ಟಗಳನ್ನು ಇಳಿಸಲು ಹೆಚ್ಚು ಒತ್ತು ನೀಡಲಾಗುತ್ತಿದೆ.

ಕಛೇರಿ ಸಮಯದಲ್ಲಿ 284-B ಬಸನ್ನು ಎಕ್ಸ್‌ಪ್ರೆಸ್ ರೂಪದಲ್ಲಿ ಓಡಿಸುವುದು.

156(349) ಶ್ರೀ ನಾರಾಯಣಸ್ವಾಮಿ ಸ್ವಾಮಿ(ಆನೇಕಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಯಲಹಂಕ ಉಪನಗರದ ಪುಟ್ಟೇನಹಳ್ಳಿಯಿಂದ ಬೆಳಗ್ಗೆ 9.15ಕ್ಕೆ ಹೊರಡುವ ಪಿ.ಹೆಚ್.ಎಸ್ ಬಸ್(ತಡೆರಹಿತ) ಎಕ್ಸ್‌ಪ್ರೆಸ್ ಸಂಚಾರ ನಿರ್ವಹಿಸುತ್ತಿರುವುದು ನಿಜವೇ;

ಆ. 284-ಬಿ ನಂಬರಿನ ಬಸ್ಸು ಬೆಳಗ್ಗೆ 9.30ಕ್ಕೆ ಎಲ್ಲಾ ಕಡೆ ನಿಲಗಡೆ ನೀಡಿ ವಿಧಾನಸೌಧದ ಮೂಲಕ ಶಿವಾಜಿನಗರಕ್ಕೆ ಕಛೇರಿ ಸಮಯದಲ್ಲಿ ಸಂಚರಿಸುತ್ತಿರುವುದು ನಿಜವಲ್ಲವೇ?

ಇ. ಸರ್ಕಾರದ ಕಛೇರಿಗಳಲ್ಲಿ ಪಂಚಿಂಗ್ ವ್ಯವಸ್ಥೆ ಅಳವಡಿಸಿರುವ ಕಾರಣ ಮೇಲಿನ ಬಸ್ಸು ಪುಟ್ಟೇನಹಳ್ಳಿಯಿಂದ ಹೊರಟು ಕಛೇರಿ ತಲುಪಲು ವಿಳಂಬವಾಗುತ್ತಿರುವುದರಿಂದ ಎಕ್ಸ್‌ಪ್ರೆಸ್ ಬಸ್ಸಾಗಿ ಪರಿವರ್ತಿಸಿ ಬೆಳಗ್ಗೆ 09.15ಕ್ಕೆ ಬಸ್ಸನ್ನು ಸಾಮಾನ್ಯವಾಗಿ ಸಂಚರಿಸುವಂತೆ ಕ್ರಮ ಕೈಗೊಳ್ಳಲು ಪರೀಶೀಲಸಾಗುವುದೇ;

ಈ. ಅದೇ ರೀತಿ ಸಾಯಂಕಾಲ ಕಛೇರಿ ಸಮಯದಲ್ಲಿ ವಿಧಾನಸೌಧದಿಂದ ಹೊರಡುವ 402ಡಿ ಬಸ್ ಪ್ರಾರಂಭದಲ್ಲಿಯೇ ಭರ್ತಿ ಆಗುತ್ತಿದ್ದು ಎಕ್ಸ್‌ಪ್ರೆಸ್ ರೂಪದಲ್ಲಿ ಓಡಿಸಲು ಕ್ರಮ ವಹಿಸಲಾಗುವುದೇ?

ಶ್ರೀ.ಬಿ.ರಮಾನಾಥ್‌ರೈ (ಸಾರಿಗೆ ಸಚಿವರು)

ಅ. ಹೌದು.

ಆ. ಹೌದು.

ಇ. ಬೆಳ್ಳಗೆ 9.15ಕ್ಕೆ ಪುಟ್ಟೇನಹಳ್ಳಿಯಿಂದ ಕಂಪೇಗೌಡ ಬಸ್ ನಿಲ್ದಾಣಕ್ಕೆ ಆಚರಣೆಯಾಗುತ್ತಿರುವ 284-ಡಿ ವಾಹನವನ್ನು ನಿಯಮಿತ ನಿಲಗಡೆಯೊಂದಿಗೆ ವೇಗಧೂತ ವಾಹನವನ್ನಾಗಿ ಕಛೇರಿಗಳಿಗೆ ಹೋಗುವ ಪ್ರಯಾಣಿಕರ ಅನುಕೂಲಕ್ಕಾಗಿ ಆಚರಣೆ ಮಾಡಲಾಗುತ್ತಿದೆ. ಬೆಳಗ್ಗೆ 9.30ಕ್ಕೆ ಪುಟ್ಟೇನಹಳ್ಳಿಯಿಂದ ಶಿವಾಜಿನಗರಕ್ಕೆ 284-ಬಿ ಮಾರ್ಗದಲ್ಲಿ ಸಾಮಾನ್ಯ ಸುತ್ತುವಳಿಯಲ್ಲಿ ಎಲ್ಲಾ ನಿಲುಗಡೆಗಳನ್ನು ನೀಡಿ ಆಚರಣೆಗೊಳಿಸಲಾಗುತ್ತಿದೆ. ಸದರಿ ಸುತ್ತುವಳಿಗಳನ್ನು ವೇಗಧೂತ ಸುತ್ತು ವಳಿಯನ್ನಾಗಿ ಪರಿವರ್ತಿಸಿದರೆ, ಮಧ್ಯದ ನಿಲುಗಡೆಗಳಲ್ಲಿ ಈ ಮಾರ್ಗವನ್ನು ಆವಲಂಬಿಸಿರುವ ಪ್ರಯಾಣಿಕರಿಗೆ ತೀರಾ ಅನಾನುಕೂಲ ಉಂಟಾಗುತ್ತದೆ.

ಈ. ವಿಧಾನಸೌಧದಿಂದ ಹೊರಡುವ 402-ಡಿ ಬಸ್ಸು ವಿಧಾನಸೌಧ ಸುತ್ತಮುತ್ತಲಿನ ಸರ್ಕಾರಿ ಕಛೇರಿ ಸಿಬ್ಬಂದಿಗೆ ಅನುಕೂಲವಾಗುವಂತೆ ಕಾರ್ಯಚರಣೆಗೊಳಿಸಲಾಗುತ್ತಿದೆ. ಈ ಬಸ್ಸನ್ನು